

**ಜೆರುಸಲೇಂ ಕೋಟೆ ಗೋಡೆ**

**ಇಸ್ರೇಲಿನ ಪ್ರವಾಸೋದ್ಯಮ ಇಲಾಖೆಯ ನಕ್ಷೆಯಲ್ಲಿ ಪ್ಯಾಲೆಸ್ತೇನಿನ ಸುಳಿವೇ ಇರಲಿಲ್ಲ! ಪ್ಯಾಲೆಸ್ತೇನಿನ ಊರುಗಳ ಕಟ್ಟೆಗಳಲ್ಲಿ ಇಸ್ರೇಲಿನ ಹೆಸರೇ ಕಾಣೆಯಾಗಿದೆ.**



ಪ್ಯಾಲೆಸ್ತೈನಿ ಇಸ್ರೇಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕವಿತೆ, ಚಿತ್ರಕಲೆಗಳಲ್ಲಿ ಸರ್ವವ್ಯಾಪಿಯಾಗಿವೆ.

ಬೆತ್ಲೆಹೆಮಿನಲ್ಲಿ ನಾವು ವಸತಿ ಮಾಡಿದ್ದ ಹೋಟೆಲು ಸಹ ಆಲಿವ್ ತೋಟದಲ್ಲಿತ್ತು. ಕೆಲವು ಮನೆಗಳಲ್ಲಿ ರಟ್ಟೆಗಾತ್ರದ ಕಾಂಡವುಳ್ಳ ದ್ರಾಕ್ಷಿ ಬಳ್ಳಿಗಳಿದ್ದು, ಅವು ಅಂಗಳದ ಚಪ್ಪರಕ್ಕೆ ಹಬ್ಬಿ, ಹಿಂದಕ್ಕೂ ಮೇಲಕ್ಕೂ ಹರಡಿ, ಇಡೀ ಮನೆಗೆ ಹಸಿರು ಪರದೆಯನ್ನು ಹೊಚ್ಚಿದ್ದವು. ಜೆರುಸಲೇಂ, ಬೆತ್ಲೆಹೆಂ, ನಜ್ರತ್, ಹೆಬ್ರೊನ್ ನಗರಗಳ ಕಣಿವೆ ತುಂಬ ಆಲಿವ್ ಮತ್ತು ದ್ರಾಕ್ಷಿತೋಟಗಳು. ದ್ರಾಕ್ಷಾರಸವು ಇಲ್ಲಿನ ಆಹಾರದ ಭಾಗ ಮಾತ್ರವಲ್ಲ, ಕ್ರೈಸ್ತ ಮತ್ತು ಯಹೂದಿಗಳ ಧಾರ್ಮಿಕ ಆಚರಣೆಯಲ್ಲಿ ಪೇಯವೂ ಹೌದು.

ಜೆರುಸಲೇಮಿನಲ್ಲಿ ತಂಪು ಹವೆ ಸದಾ ತೀಡುತ್ತಿರುತ್ತದೆ. ಚಳಿಗಾಲದಲ್ಲಿ ಮೊಳಕಾಲುದ್ದ ಹಿಮ ಸುರಿಯುತ್ತದೆ. ಇಲ್ಲಿಂದ ಕೇವಲ ಮೂವತ್ತು ಕಿ.ಮೀ. ದೂರ ಮೃತಸಮುದ್ರದ ದಿಕ್ಕಿನಲ್ಲಿ ಹೋದರೆ ಚಿಗುರುಹುಲ್ಲೂ ಬೆಳೆಯದ ಬೋಳುಬೆಟ್ಟಗಳ ಮರುಭೂಮಿ! ಒಂದು ತಾಸು ಪಯಣಿಸಿದರೆ, ಯಾವ ಜೀವಿಯೂ ಬದುಕಲಾರದ ಮೃತಸಮುದ್ರ. ಇವುಗಳ ಹಿನ್ನೆಲೆಯಲ್ಲಿ ಜೆರುಸಲೇಮಿನ ತಂಪು ಹವೆ, ಪೈನ್ ಕಾಡು, ಫಲವತ್ತಾದ ನೆಲೆ, ನೀರುಕ್ಕುವ ಚಿಲುಮೆ, ಪುಟ್ಟ ಹೊಳೆ, ವಿಶಾಲ ಕಣಿವೆ, ಹಸಿರುಹೊದ್ದ ಬೆಟ್ಟ, ದ್ರಾಕ್ಷಿ, ಉತ್ತುತ್ತೆ, ಬಾದಾಮಿ ತೋಟಗಳು ನಗರವನ್ನು ಭೂಸ್ವರ್ಗವಾಗಿಸಿವೆ. ಆದಿಮ ಸಮುದಾಯಗಳು ಇದನ್ನು ತಮ್ಮ ವಾಸಕ್ಕೂ ದೈವಮಂದಿರಗಳಿಗೂ ತಕ್ಕ ಜಾಗವೆಂದು ಭಾವಿಸಿರುವುದರಲ್ಲಿ ಸೋಜಿಗವೇನಿಲ್ಲ. ಜೆರುಸಲೇಮಿನ ಸೌಂದರ್ಯವನ್ನು ಕಲಾವಿದರು, ಶಿಲ್ಪಿಗಳು, ಕವಿಗಳು ತಮ್ಮ ಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ಜೆರುಸಲೇಂ ಈಗಲೂ ಎತ್ತಲಿಂದ ನೋಡಿದರೂ ಚಂದವಾಗಿ ಕಾಣುವ ಸುಂದರ ನಗರಿ.

ದವಸ, ಹಣ್ಣುಹಂಪಲು, ಪಶುಸಂಪತ್ತು ಸಮೃದ್ಧ ಸಿಗುವ ಊರುಗಳು ಸಹಜವಾಗಿಯೇ ವ್ಯಾಪಾರಿ ಕೇಂದ್ರಗಳಾಗಿ ಬೆಳೆಯುತ್ತವೆ. ಈಜಿಪ್ತ್, ಲೆಬನಾನ್, ಸಿರಿಯಾ, ಇರಾಕ್, ಜೋರ್ಡಾನ್‌ಗಳ ನಡುವಿರುವ, ಭೂಮಂಡಲದ ಕೇಂದ್ರವೆಂದು ಕರೆಯಲ್ಪಡುವ ಜೆರುಸಲೇಂ, ಪ್ರಾಚೀನ ವಣಿಕ ಪಥಗಳು ಹಾದು ಹೋಗಿರುವ ನಗರ. ಸಂಪತ್ತು ಸಂಚಯವಾಗುವ ನಗರಗಳು ರಾಜಕೀಯ ದಾಳಿಕೋರರನ್ನು ಸೆಳೆಯುತ್ತವೆ. ನಗರವನ್ನು ಕಾಯಲು ಬಲಾಢ್ಯ ಕೋಟೆ ರೂಪುಗೊಳ್ಳುತ್ತವೆ. ಜೆರುಸಲೇಮಿನ ವಿಶಾಲ ಕೋಟೆಗೆ ಜಾಫಾ, ಡಮಾಸ್ಕಸ್ ಮುಂತಾದ ನಗರಗಳ ಹೆಸರುಳ್ಳ ಪ್ರಸಿದ್ಧ ದ್ವಾರಗಳಿವೆ, ದೆಹಲಿಯ